ಸಮ್ಮುಖದಲ್ಲಿ ಮಾತನಾಡುವಾಗ ಯೋಚಿಸಿ, ಎಚ್ಚರದಿಂದ ಮಾತನಾಡಬೇಕು. ಪ್ರತಿ ಮಾತನ್ನೂ ತೂಗಿ ನೋಡಿ ಆಡಬೇಕು. ಹಿತವಾದುದನ್ನೇ ಹೇಳಬೇಕು, ಸಂಯಮದಿಂದ ಹೇಳಬೇಕು, ಅರ್ಥವತ್ತಾಗಿಯೂ ಹೇಳಬೇಕು. ಇದರ ಅರ್ಥ, ಮಾತನ್ನು ಚೆನ್ನಾಗಿ ಆಡಬೇಕು ಎಂದು ಇಲ್ಲ–ಸಲ್ಲದ ಮಾತನ್ನಾಗಲೀ ಸುಳ್ಳನ್ನಾಗಲೀ ಆಡಬೇಕು ಎಂದಲ್ಲ. ಸರಿಯಾದ ಮಾತನ್ನು ಆಡುವುದು ಎಷ್ಟು ಕಷ್ಟದ ಕೆಲಸ ಎನ್ನುವುದನ್ನು ಮನುಸ್ಮೃತಿಯ ಮಾತೊಂದು ಎತ್ತಿಹಿಡಿದಿದೆ:

*ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್*
*ನ ಬ್ರೂಯಾತ್ ಸತ್ಯಮಪ್ರಿಯಂ |*
*ಪ್ರಿಯಂ ಚ ನಾನೃತಂ ಬ್ರೂಯಾತ್*
*ಏಷ ಧರ್ಮಃ ಸನಾತನಃ ||*

'ಸತ್ಯವನ್ನೇ ಹೇಳಬೇಕು. ಪ್ರಿಯವಾದುದನ್ನೇ ಹೇಳಬೇಕು. ಆದರೆ ಪ್ರಿಯವಲ್ಲದ ಸತ್ಯವನ್ನಾಗಲೀ, ಪ್ರಿಯವಾದ ಸುಳ್ಳನ್ನಾಗಲೀ ಹೇಳಬಾರದು. ಇದು ಬಹಳ ಹಿಂದಿನ ಕಾಲದಿಂದಲೂ ಬಂದಿರುವ ಸಂಪ್ರದಾಯ.' ಇದು ಈ ಶ್ಲೋಕದ ತಾತ್ಪರ್ಯ. ಇದನ್ನೇ ಬಸವಣ್ಣನವರ ವಚನವೂ, ಇನ್ನೊಂದು ರೀತಿಯಲ್ಲಿ ಹೇಳಿದೆ:

*ನುಡಿದರೆ ಮುತ್ತಿನ ಹಾರದಂತಿರಬೇಕು*
*ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು*
*ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು*
*ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು*
*ನುಡಿಯೊಳಗಾನು ನಡೆಯದಿದ್ದರೆ ಮೆಚ್ಚ ನಮ್ಮ ಕೂಡಲಸಂಗಮದೇವ ||*

ಶಕ್ತಿ ಇರುವುದೇ ಮುಖ್ಯವಲ್ಲ; ಅದನ್ನು ಯಾವಾಗ ಉಪಯೋಗಿಸಬೇಕೆಂಬ ತಿಳಿವಳಿಕೆ ಅದಕ್ಕಿಂತಲೂ ಮುಖ್ಯ. ಹಣ ಇರುವುದೇ ದೊಡ್ಡಸ್ತಿಕೆಯಲ್ಲ; ಅದರ ವಿನಿಯೋಗ ಯಾವಾಗ, ಎಲ್ಲಿ ಎನ್ನುವ ಬುದ್ಧಿಯೇ ನಿಜವಾದ ಆಸ್ತಿ. ಚೆನ್ನಾಗಿ ಮಾತನಾಡುವುದೇ ವಿಶೇಷವಲ್ಲ; ಅದನ್ನು ಯಾವ ಕಾಲದಲ್ಲಿ, ಯಾರೊಂದಿಗೆ, ಹೇಗೆ ಬಳಸಬೇಕೆಂಬ ಸಾಮಾನ್ಯಜ್ಞಾನವೇ ದಿಟವಾದ ಪ್ರತಿಭೆ. ನಮ್ಮನ್ನು ಕಾಪಾಡದ ಅಮೃತ ಅದು ನಮ್ಮ ಪಾಲಿಗೆ ವಿಷವೇ ಸರಿ; ನಮ್ಮನ್ನು ರಕ್ಷಿಸಬಲ್ಲ ವಿಷ ಅದು ನಮ್ಮ ಪಾಲಿಗೆ ಅಮೃತವೇ ಹೌದು. ಯಾವುದು ನಮಗೆ ಹಿತವಾದದ್ದು, ಯಾವುದು ನಮಗೆ ಅಹಿತವಾದದ್ದು ಎಂಬ ಅರಿವೇ ನಮ್ಮ ಜೀವನದ ಮಹಾದರ್ಶನ. ಈ ಕಥೆಯಲ್ಲಿಯ ಪಕ್ಷಿಗಳು 'ಹಂಸ' ಎನ್ನುವುದೂ ಕೂಡ ಒಂದು ರೂಪಕವಾಗಿದೆ. 'ಹಂಸಕ್ಷೀರನ್ಯಾಯ' ಎಂಬ ಮಾತು ಪ್ರಸಿದ್ಧವಾಗಿದೆ. ಹಾಲು–ನೀರುಗಳ ಮಿಶ್ರಣದಲ್ಲಿ ಹಂಸಗಳು ಹಾಲನ್ನು ಮಾತ್ರ ಹೀರಿ ನೀರನ್ನು ಹಾಗೆಯೇ ಉಳಿಸುತ್ತದೆ ಎನ್ನುವುದು ಈ ಮಾತಿನ ಹಿನ್ನೆಲೆ. ಆದರೆ ಆಮೆಗೆ ಅಂಥ ವಿವೇಕಶಕ್ತಿ ಇರಲಿಲ್ಲ. ಜನರ ಟೀಕೆಗಳನ್ನು ಉಪೇಕ್ಷಿಸಬೇಕು – ಎಂಬ ಅರಿವು ಅದಕ್ಕೆ ಅಂಥ ಸೂಕ್ಷ್ಮಸಂದರ್ಭದಲ್ಲೂ ಮೂಡಲಿಲ್ಲ ಎನ್ನುವುದನ್ನು ನಾವಿಲ್ಲಿ ಗಮನಿಸಬೇಕು. ಜೀವವನ್ನು ಉಳಿಸುವ ಮೌನಕ್ಕಿಂತಲೂ ಅದಕ್ಕೆ ಪ್ರಾಣವನ್ನು ತೆಗೆಯುವಂಥ ಮಾತೇ ಮುಖ್ಯವಾಯಿತು. ನಮ್ಮ ಸ್ವಭಾವವೇ ನಮಗೆ ಹೇಗೆ ಶತ್ರುವಾಗಿ ನಮ್ಮನ್ನು ಕೊಲ್ಲುತ್ತದೆ ಎನ್ನುವುದಕ್ಕೆ ಈ ಕಥೆ ಒಳ್ಳೆಯ ಉದಾಹರಣೆಯಾಗಿದೆ.